ದಿನಾಂಕ 01.08.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು:- ಶ್ರೀ ಎಂ.ಆರ್.ಕೆ ವಕೀಲರಿಂದ:

ನಮ್ಮ ತಂದೆಯವರು ಮರಣ ಹೊಂದಿದಾಗ ಅವರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ನಮ್ಮ ತಂದೆಯವರ ಜೀವಿತ ಕಾಲದಲ್ಲಿ ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದೆವು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ನಮ್ಮ ತಂದೆಯವರ ಜೀವಿತ ಕಾಲದಲ್ಲಿ ನಾನು ಮತ್ತು ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ಒಟ್ಟು ಕುಟುಂಬದಲ್ಲಿ ವ್ಯವಸಾಯ ಮಾಡುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆಯವರ ಜೀವಿತ ಕಾಲದಲ್ಲಿ ಪಿತ್ರಾರ್ಜಿತ ಆಸ್ತಿಗಳು ವಿಭಾಗವಾಗಿರುವ ಕಾರಣ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-3ರ ಸ್ವತ್ತಿನ ಖಾತೆಯು 1981-82ನೇ ಸಾಲಿನಿಂದಲೂ ಪ್ರತಿವಾದಿ 3 ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ದಾವಾ 'ಸಿ' ಷೆಡ್ಯೂಲ್ ಸ್ವತ್ತು 2010-11ನೇ ಸಾಲಿನಿಂದಲೂ ಪ್ರತಿವಾದಿ 8 ರವರು ಕ್ರಯಕ್ಕೆ ಪಡೆದು ನಿಪಿ-4 ರಂತೆ ಅವರ ಹೆಸರಿಗೆ ಖಾತೆ ದಾಖಲಾಗಿರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ವಿಚಾರ ತಿಳಿದ ನಂತರ ನಾನು ನ್ಯಾಯಾಲಯಕ್ಕೆ ದಾವೆ ಹಾಕಿರುತ್ತೇನೆ. ನಿಪಿ-3 ಮತ್ತು 4 ರಂತೆ ಪ್ರತಿವಾದಿ 3 ಮತ್ತು 8 ರವರ ಹೆಸರುಗಳಲ್ಲಿ ಖಾತೆ ದಾಖಲಾಗಿರುವ ಬಗ್ಗೆ ನನಗೆ ತಿಳಿದ ನಂತರ ನಾನು ಯಾವುದೇ ಕಂದಾಯ ಅಧಿಕಾರಿಗಳ ಮುಂದೆ ಖಾತೆ ರದ್ದು ಕೋರಿ ಪ್ರಕರಣ ದಾಖಲಿಸಿರುವುದಿಲ್ಲ. ದಾವಾ 'ಡಿ' ಷೆಡ್ಯೂಲ್ ಸ್ವತ್ತು 2009-10ನೇ ಸಾಲಿನಿಂದಲೂ ಪ್ರತಿವಾದಿ 8 ರವರ ಹೆಸರಿನಲ್ಲಿ ಖಾತೆ ದಾಖಲಾಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಪ್ರತಿವಾದಿ 8 ರವರು ಅಕ್ರಮ ದಾಖಲೆಗಳನ್ನು ಅನುಸರಿಸಿ ತಮ್ಮ ಹೆಸರಿಗೆ ಖಾತೆ ದಾಖಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ದಾವಾಪತ್ರದಲ್ಲಿ ದಾವಾ 'ಬಿ' ರಿಂದ 'ಡಿ' ರವರೆಗಿನ ಸ್ವತ್ತುಗಳನ್ನು ಪ್ರತಿವಾದಿ 3 ಮತ್ತು 8 ರವರು ಅಕ್ರಮ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಇತ್ತೀಚೆಗೆ ತಿಳಿದಿರುತ್ತದೆ ಎಂದು ನನ್ನ ದಾವಾ ಪತ್ರದಲ್ಲಿ ಬರೆಸಿರುವುದಿಲ್ಲ.

ನಿಪಿ-6 ರ ಕ್ರಯ ಪತ್ರದಲ್ಲಿರುವ ಚೆಕ್ಕುಬಂಧಿಯ ಪಶ್ಚಿಮಕ್ಕೆ ಇರುವ ವೆಂಕಟಾಚಲ ರವರ ಜಮೀನು ನನ್ನದೇ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನ ಸರ್ವೆ ನಂಬರ್ 552 ಆಗಿರುತ್ತದೆ. ಸದರಿ ಸರ್ವೆ ನಂಬರ್ 552 ರ ಜಮೀನು ನಮ್ಮ ಮಾವನವರಿಂದ ಬಂದಿರುತ್ತದೆ ಎಂದು ಈ ದಾವೆಯಲ್ಲಿ ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಸಾಕ್ಷಿಯು ಮುಂದುವರೆದು ಸದರಿ ಸರ್ವೆ ನಂಬರ್ 552 ರ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತಾಗಿರುವುದರಿಂದ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ 552 ರ ಸ್ವತ್ತು ನಮ್ಮ ಮಾವನವರಿಂದ ಬಂದಂತಹ ಸ್ವತ್ತಾಗಿರದೇ ನನಗೆ ನಮ್ಮ ಪಿತ್ರಾರ್ಜಿತ ಸ್ವತ್ತುಗಳ ವಿಭಾಗದಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ-7ರ ಕ್ರಯಪತ್ರದ ಷೆಡ್ಯೂಲ್ ನಲ್ಲಿ ಪಶ್ಚಿಮಕ್ಕೆ ಆಲೇಗೌಡರ ಉಳಿಕೆ ಭೂಮಿ ಎಂದು ನಮೂದಿಸಿದೆ ಎಂದರೆ ಸರಿಯಲ್ಲ. ನಿಪಿ-7ರ ಕ್ರಯಪತ್ರದ ಷೆಡ್ಯೂಲ್ ನ ಪಶ್ಚಿಮದಲ್ಲಿ

ನಮೂದಿಸಿರುವ ಆಲೇಗೌಡ ಎಂಬುವವರು ನನ್ನ ತಮ್ಮ ಎಂದರೆ ಸರಿಯಲ್ಲ. ಈಗಾಗಲೇ ನಮ್ಮ ಪಿತ್ರಾರ್ಜಿತ ಸ್ವತ್ತುಗಳು ವಿಭಾಗವಾಗಿರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತೆಳ್ಳನೂರು ಗ್ರಾಮದ ಸರ್ವೆ ನಂಬರ್ 543 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 87 ಸೆಂಟ್ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ 543 ರ ಪೈಕಿ 2 ಎಕರೆ ಜಮೀನನ್ನು ನನ್ನ ಅಣ್ಣ 1ನೇ ಪ್ರತಿವಾದಿರವರಿಗೆ ಭಾಗವಾಗಿ ನೀಡಿರುವ ಸ್ವತ್ತು ಎಂದರೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ 543 ರ ಪೈಕಿ 2 ಎಕರೆ, 87 ಸೆಂಟ್ ಜಮೀನನ್ನು ನನ್ನ ಅಣ್ಣ 2ನೇ ಪ್ರತಿವಾದಿರವರಿಗೆ ಭಾಗವಾಗಿ ನೀಡಿರುವ ಸ್ವತ್ತು ಎಂದರೆ ಗೊತ್ತಿಲ್ಲ. ತೆಳ್ಳನೂರು ಗ್ರಾಮದ ಸರ್ವೆ ನಂಬರ್ 552 ರ ಜಮೀನು ನನ್ನ ಭಾಗಕ್ಕೆ ಬಂದ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ 543 ರ ಜಮೀನಿನ ಸ್ವತ್ತನ್ನು ದಿನಾಂಕ 05.12.1975 ರಂದು ನಂಜನಾಯಕ ರವರ ಮಗ ದುಂಬಿ ನಂಜನಾಯಕ ರವರಿಗೆ ಕ್ರಯ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ತೆಳ್ಳನೂರು ಗ್ರಾಮದ ಸರ್ವೆ ನಂಬರ್ 442 ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 85 ಸೆಂಟ್ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ 442 ರ ಸ್ವತ್ತನ್ನು ದಿನಾಂಕ 06.02.1976 ರಂದು 1ನೇ ಪ್ರತಿವಾದಿ ಸಂಜೀವಯ್ಯರವರ ಮಗ ಮಾದಶೆಟ್ಟಿ ರವರಿಗೆ ಕ್ರಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತೆಳ್ಳನೂರು ಗ್ರಾಮದ ಸರ್ವೆ ನಂಬರ್ 442 ರಲ್ಲಿ 3 ಎಕರೆ 85 ಸೆಂಟ್ ಜಮೀನು ಪ್ರತಿವಾದಿ 1 ರವರ ಹೆಸರಿಗೆ, ಸದರಿ ಗ್ರಾಮದ ಸರ್ವೆ ನಂಬರ್ 543 ರಲ್ಲಿ 2 ಎಕರೆ 87 ಸೆಂಟ್ ಜಮೀನು ಪ್ರತಿವಾದಿ 2 ರವರ ಹೆಸರಿಗೆ, ದಾವಾ ಸಿ ಷೆಡ್ಯೂಲ್ ನಲ್ಲಿ 3 ಎಕರೆ 64 ಸೆಂಟ್ ಪ್ರತಿವಾದಿ 3 ರವರ ಹೆಸರಿಗೆ ಹಾಗೂ ಸದರಿ ಗ್ರಾಮದ ಸರ್ವೆ ನಂಬರ್ 552 ರಲ್ಲಿ 2 ಎಕರೆ 87 ಸೆಂಟ್ ಜಮೀನು ನನ್ನ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಿವೇಶನ ಮತ್ತು ಮನೆಗಳಲ್ಲಿ ನಾನು ಮತ್ತು ಪ್ರತಿವಾದಿ 1 ರಿಂದ 3 ರವರು ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ತಂದೆಯವರ ಜೀವಿತ ಕಾಲದಲ್ಲಿ ನಾವು ಬ್ಯಾಂಕ್ ನಿಂದ, ಕಾಮಯ್ಯ, ಹುಚ್ಚಯ್ಯ, ಮಲೆಯಪ್ಪನಾಯಕ, ಕೆಂಪೇಗೌಡರವರುಗಳಿಂದ ಸಾಲ ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಮಗೆ ಸಾಕಷ್ಟು ಆಸ್ತಿಗಳಿದ್ದು, ನಾವು ಎಲ್ಲಾ ಸಾಲಗಳನ್ನು ತೀರಿಸಿರುತ್ತೇವೆ. ಸದರಿ ಸಾಲಗಳನ್ನು 3ನೇ ಪ್ರತಿವಾದಿ ತೀರಿಸಿರುತ್ತಾರೆ ಹಾಗೂ ಸದರಿಯವರು ಹೆಣ್ಣು ಮಕ್ಕಳಿಗೆ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ 'ಎ' ಮತ್ತು 'ಬಿ' ಸ್ವತ್ತುಗಳು 1980ರ ಪೂರ್ವದಲ್ಲೇ ವಿಭಾಗ ಆಗಿದ್ದವು ಎಂದರೆ ಸರಿಯಲ್ಲ. ದಾವಾ 'ಸಿ' ಮತ್ತು 'ಡಿ' ಆಸ್ತಿಗಳು 3ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಮ್ಮ ತಂದೆಯವರು ದಿನಾಂಕ 25.02.1983 ರಂದು ದಾವಾ 'ಬಿ' ಮತ್ತು 'ಸಿ' ಸ್ವತ್ತುಗಳಿಗೆ ಸಂಬಂಧಿಸಿದಂತೆ 3ನೇ ಪ್ರತಿವಾದಿರವರಿಗೆ ವಿಲ್ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಮರಣದ ನಂತರ ಸದರಿ ವಿಲ್ ಪತ್ರಗಳನ್ನು ಪ್ರಶ್ನಿಸಿ ಪ್ರಕರಣ ದಾಖಲಿಸಲು ನನಗೆ ಯಾವುದಾದರೂ ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ನಾವು ಒಟ್ಟು ಕುಟುಂಬದಲ್ಲಿ ಚೆನ್ನಾಗಿಯೇ ಇದ್ದೆವು ಆದ ಕಾರಣ ಸದರಿ ವಿಲ್ ಪತ್ರಗಳನ್ನು ಪ್ರಶ್ನಿಸಿರುವ ಸಂದರ್ಭ ಉದ್ಭವವಾಗುವುದಿಲ್ಲ. ನಾವು ಒಟ್ಟು ಕುಟುಂಬದಲ್ಲಿ ವಾಸವಿಲ್ಲದೇ ಸದರಿ ವಿಲ್ ಪತ್ರಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ನಾನು ಸರಿಯಾದ ಕಾಲ ಪರಿಮಿತಿಯಲ್ಲಿ ದಾವೆ ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಈಗಾಗಲೇ ನಮ್ಮ ಪಿತ್ರಾರ್ಜಿತ ಆಸ್ತಿಗಳು ವಿಭಾಗವಾಗಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ